ಓ.ಎಸ್. ನಂ.53/2016ರಲ್ಲಿ
ಪಿ.ಡಬ್ಲ್ಯೂ-1(ಎಂ ಎ.ಷರೀಫ್)

ದಿನಾಂಕ 21-11-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ಪ್ರತಿವಾದಿಗೆ ಎಷ್ಟು ಬಾರಿ ನೋಟೀಸು ಕಳುಹಿಸಿದ್ದೇನೆಂದು ನೆನಪಿಲ್ಲ. ದಿನಾಂಕ 14.01.2016 ರಂದು (ನಿಪಿ 8) ಪ್ರತಿವಾದಿಗೆ ಕಳುಹಿಸಿದ ನೋಟೀಸು ಮಾತ್ರ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ 2 ರಿಂದ 4 ಪಹಣಿಗಳು ಒಬ್ಬರ ಹೆಸರಿನಲ್ಲಿವೆ ಎಂದರೆ ಸರಿ. ನಿಪಿ 2 ರಿಂದ 4 ನ್ನೂ ತೆಗೆದುಕೊಂಡಿರುವುದು 15.02.14 ರಲ್ಲಿ ಎಂದರೆ ಸರಿ. ಸಿಂಗಲ್ ಪಹಣಿ ಇದ್ದಲ್ಲಿ ಕ್ರಯಪತ್ರ ರಿಜಿಸ್ಟ್ರರ್ಗೆ ಅಡ್ಡಿ ಇಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಿಂಗಲ್ ಪಹಣಿ ಇದ್ದರೂ ಸಹ ನಾನೇ ಕ್ರಯಪತ್ರವನ್ನು ನನ್ನ ಪತ್ನಿಯ ಪರವಾಗಿ ಮಾಡಿಸಿಕೊಳ್ಳಲು ಸಿದ್ದರಿದ್ದರರೆಂದರೆ ಸರಿಯಲ್ಲ. ನಾನು ಪ್ರಮಾಣಿಕ ಕ್ರಯದಾರನಲ್ಲ ರಿಯಲ್ ಎಸ್ಟ್ೀಟ್ ವ್ಯವಹಾರಕ್ಕೆ ಮಾತ್ರ ಖರೀದಿ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಗೆ ದೈಹಿಕವಾಗಿ ಹಾಗೂ ಆರ್ಥಿಕವಾಗಿ ತೊಂದರೆ ಕೊಡುವ ಉದ್ದೇಶದಿಂದಲೇಕ್ರಯಪತ್ರ ನೋಂ಼ೀದಣಿ ಮಾಡಿಸಿಕೊಳ್ಳಲು ಮುಂದೂಡುತ್ತಾ ಬಂದರು ಎಂದರೆ ಸರಿಯಲ್ಲ. ಸತತ 3 ವರ್ಷಗಳಿಂದಲೂ ದಾಖಲೆ ರೆಡಿ ಇದ್ದರೂ ಸಹ ನಾನೇ ಕ್ರಯಪತ್ರ ನೊಂದಣಿ ಮಾಡಿಸಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವಇಚ್ಛೆಯಿಂದ ನಾನೇ ಖುದ್ದಾಗಿ ಹೋಗಿ ಹಣ ಕೊಟ್ಟಿದ್ದೇನೆಂದು ನುಡಿಯುತ್ತಾರೆ. ನಾನು 65 ಲಕ್ಷ ಪಾವತಿಸಿದ್ದೇನೆ. 50 ಲಕ್ಷ ತೆಗೆದುಕೊಂಡು ಹೋಗಿದ್ದೇ ಅವರು ತೆಗೆದುಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. 23.07.2012 ರಂದು ದಾಖಲೆಗಳೆಲ್ಲಾ ರೆಡಿ ಇವೆ ಕ್ರಯಪತ್ರ ಮಾಡಿಸಿಕೊಳ್ಳಿ ಎಂದು ಪ್ರತಿವಾದಿ ನಿಮಗೆ ನೋಟೀಸು ಕೊಟ್ಟಿದ್ದರೂ ಎಂದರೆ ಸಾಕ್ಷಿ ಕೊಟ್ಟಿರಬಹುದು ಆದರೆ ಅವರ ಬಳಿ ದಾಖಲೆ ಇರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನೋಟೀಸು ಕೊಟ್ಟಿರುವುದು ಅವರ ಬಳಿ ದಾಖಲೆ ರೆಡಿ ಇದ್ದೂದ್ದರಿಂದಲೇ ಎಂದರೆ ಸರಿಯಲ್ಲ. 29.07.2013 ರಂದು ಪ್ರತಿವಾದಿಗೆ

ನೀವು ಈ ದಾಖಲೆಗೆ ನೋಟೀಸು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ದಾಖಲೆ ನೋಡಿ ಒಪ್ಪಿ ರುತ್ತಾರೆ ಅದನ್ನು ನಿಡಿ 45 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಸಿ ದಿನಾಂಕ 12.12.2013 ರಂದು ಪ್ರತಿವಾದಿಗೆ ನಿಮಗೆ ಈ ನೋಟೀಸಿನಲ್ಲಿ ಹೇಳಿರುವ ಎಲ್ಲಾ ದಾಖಲೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಮಗೆ ಎಲ್ಲಾ ದಾಖಲೆಯನ್ನು ಕೊಟ್ಟಿದ್ದರೂ ಸಹ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದಾರೆಂದರೆ ಸರಿಯಲ್ಲ. ದಿನಾಂಕ 21.12.2013 ರಂದು ನಿಮ್ಮ ವಕೀಲರು ಮತ್ತೆ ಪ್ರತಿವಾದಿ ಪರ ವಕೀಲರಿಗೆ ಈ ರೀತಿ ನೋಟೀಸು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ ಅದನ್ನು ನಿಡಿ-46 ಎಂದು ಗುರುತಿಸಲಾಯಿತು.

ನನಗೆ ಈಗ ತೋರಿಸಲಾದ ದಾಖಲೆಯಂತೆ ನಿಡಿ-46 ಕ್ಕೆ ಪ್ರತಿವಾದಿಯವರು 18.01.2014 ರಂದು ರಿಪ್ಲೇ ಕಳುಹಿಸಿದ್ದಾರೆಂದರೆ ಸಾಕ್ಷಿ ದಾಖಲೆನೋಡಿ ಅಂಚೆ ಸ್ವೀಕೃತಿಯಲ್ಲಿರುವ ಸಹಿ ನನ್ನ ಪತ್ನಿಯದಲ್ಲ ಎಂದು ನುಡಿಯುತ್ತಾರೆ. ದಿನಾಂಕ 05.02.2014 ರಂದು ನಿಮ್ಮ ಪರ ವಕೀಲರು ನಾವು ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳಲು ಬದ್ದರಿದ್ದೇವೆ ದಿನಾಂಕ ನಿಗದಿ ಮಾಡಿ ಎಂದು ಹೇಳಿ ಪ್ರತಿವಾದಿಗೆ ಈ ದಾಖಲೆಯಂತೆ ನೋಟೀಸು ಕಳುಹಿಸಿದ್ದರೂ ಎಂದರೆ ಸಾಕ್ಷಿ ದಾಖಲೆ ನೋಡಿ ಇರಬಹುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೋಟೀಸನ್ನು ಪಡೆದುಕೊಂಡಿದ್ದರೂ ಸಹ ಕೇಸಿಗೆ ಅನಾನುಕೂಲವಾಗುತ್ತದೆಂದು ಸುಳ್ಳು ಹೇಳುತ್ತಿದ್ದಾರೆಂದರೆ ಸರಿಯಲ್ಲ. ನೀವು ಪ್ರತಿವಾದಿಗೆ 2 ಚೆಕ್ಕನ್ನು ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಕೊಟ್ಟಿದ್ದೇನೆಂದು ನುಡಿಯುತ್ತಾರೆ. 1 ಚೆಕ್ಕು ದಿನಾಂಕ 10.06.2016 ರಂದು ಅಮಾನ್ಯ ಗೊಂಡಿದ್ದು ನಿಮಗೆ ನೋಟೀಸು ಕೊಟ್ಟಿದ್ದರೂ ಎಂದರೆ ಸಾಕ್ಷಿ ಇಲ್ಲ ಅದರ ಬದಲು ಹಣ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಅದನ್ನು ಸಾಬೀತು ಪಡಿಸುತ್ತೇನೆಂದು ನುಡಿಯುತ್ತಾರೆ. ಚೆಕ್ಕನ್ನು ಯಾಕೆ ವಾಪಸ್ಸು ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ಅವರು ಚೆಕ್ಕನ್ನು ವಾಪಸ್ಸು ಕೊಡಲಿಲ್ಲವೆಂದು ನುಡಿಯುತ್ತಾರೆ. ನಾನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಹಣ ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಬಳಿ ಇಷ್ಟು ಹಣ ಇತ್ತು ಎಂದು ತೋರಿಸಲು ಬ್ಯಾಂಕ್ ಖಾತಾ ದಾಖಲೆ ಹಾಜರುಪಡಿಸಬಲ್ಲೆ. ನನ್ನದು ಐಸಿಐಸಿಐ ಬ್ಯಾಂಕ್ ಹಾಗೂ ಭರತ್ ಬ್ಯಾಂಕ್ ನಲ್ಲಿ ಖಾತೆ ಇದೆ. ನನ್ನ ಎಲ್ಲಾ ವ್ಯವಹಾರ ಈ ಖಾತೆಗಳಿಂದ ನಡೆಯುತ್ತಿದೆ. ನನಗೆ ಈಗ ತೋರಿಸಲಾದ ಚೆಕ್ಕು ಮೇಲೆ ಹೇಳಿದ ಭರತ್ ಬ್ಯಾಂಕ್ ನನ್ನ ಖಾತೆಗೆ ಸೇರಿದ ಬ್ಯಾಂಕ್ ಅದನ್ನು ನಿಡಿ-47 ಎಂದು ಗುರುತಿಸಲಾಯಿತು. (ಎರಡು ಹಿಂಬರಹಗಳೊಂದಿಗೆ ಗುರುತಿಸಲಾಯಿತು) 2013 ರಿಂದ 2018 ರವರೆಗೆ ನನ್ನ ಬಳಿ ಸಾಕಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಬೇರೆ ಬೇರೆ ಕಡೆ ಜಮೀನು ಕೊಂಡುಕೊಳ್ಳುವುದು ವಾಪಸ್ಸು ಮಾಡುವುದು ಮಾಡುತ್ತಿದ್ದೇ ಅದ್ದರಿಂದ ನನ್ನ ಬಳಿ ಸಾಕಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು:** ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಕಾರಣವಿಲ್ಲದೇ ತಿರಸ್ಕರಿಸಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.